

**ವಿದುರ ಎಂದರೆ ಎಲ್ಲವನ್ನೂ ತಿಳಿದವನು, ವಿದ್ವಾಂಸ ಎಂದಂತೆ. ಈ ಹೆಸರು ಅವನಿಗೆ ಅನ್ವರ್ಥ ಎಂದು ಅವನಿಗೆ ವಿದ್ಯೆ ಹೇಳಿದ ಗುರುಗಳು ಹೇಳುತ್ತಿದ್ದರು. ಎಲ್ಲಾ ರೀತಿಯಲ್ಲಿ ಸಮರ್ಥನಿದ್ದರೂ ದಾಸಿಪುತ್ರನೆಂಬ ಕಳಂಕ ಹೊತ್ತ ವಿದುರನಿಗೆ ಕಿರೀಟ ತಪ್ಪಿ ಅಂಧ ಧೃತರಾಷ್ಟ್ರನಿಗೆ ಪಟ್ಟವಾಯಿತು.**

■ **ಕುಮುದಾ ಪುರುಷೋತ್ತಮ್**

ಭೀಷ್ಮ ಪಿತಾಮಹ ತಲೆತಗ್ಗಿಸಿ ಕುಳಿತಿದ್ದರು. ಕಣ್ಣಿನಿಂದ ಧಾರಾಕಾರವಾಗಿ ಹರಿಯುತ್ತಿದ್ದ ಬಾಷ್ಪ ಹುಲುಸಾಗಿ ಬೆಳೆದಿದ್ದ ಬಿಳಿಗಡ್ಡವನ್ನು ತೋಯಿಸಿ ಒಂದೊಂದೇ ಹನಿಯಾಗಿ ನೆಲ ತೋಯಿಸುತ್ತಿತ್ತು. ತಾನೂ ತಲೆತಗ್ಗಿಸಿ ಅವರ ಮುಂದೆ ಕುಳಿತಿದ್ದ ಕುಂತಿಯ ಕಣ್ಣಿನಿಂದಲೂ ಅಶ್ರು ಹರಿದು ಮುಂದಿದ್ದ ಸೆರಗನ್ನು ಒದ್ದೆಮಾಡಿತು.

'ನನ್ನ ಕುರು ಸಾಮ್ರಾಜ್ಯದ ಏಳ್ಗೆಯ ಬಗ್ಗೆ ಏನೆಲ್ಲಾ ಕನಸು ಕಂಡಿದ್ದೆ. ಧೀರರೂ, ಶೂರರೂ, ಧರ್ಮಾತ್ಮರೂ ಆದ ನಿನ್ನ ಮಕ್ಕಳು ಅದನ್ನು ಮುನ್ನಡೆಸುವರು ಎಂದು ಎಷ್ಟೆಲ್ಲಾ ಆಸೆಪಟ್ಟಿದ್ದೆ. ಅದಕ್ಕಾಗಿ ನಾನು ಕೈಮೀರಿ ಪ್ರಯತ್ನಿಸಿದ್ದೆ ಕೂಡ. ಆದರೆ ನಿನ್ನ ಹಿರಿಯಪುತ್ರ ಧರ್ಮಜ ತನ್ನ ದ್ಯೂತದ ಚಟಕ್ಕೆ ಬಲಿಯಾಗಿ ನನ್ನೆಲ್ಲಾ ಕನಸುಗಳಿಗೆ ಕೊಳ್ಳಿ ಇಟ್ಟ. ತನ್ನನ್ನಷ್ಟೇ ಅಲ್ಲದೆ ತಮ್ಮಂದಿರನ್ನೂ, ಪತ್ನಿಯನ್ನೂ ಒತ್ತೆ ಇಟ್ಟು ಅವರನ್ನೂ ನಾಶ ಮಾಡಿದ' ಅರ್ಧ ಕ್ರೋಧ ಅರ್ಧ ವಿಷಾದದಿಂದ ಭೀಷ್ಮರು ಉಸುರಿದರು.

'ಚೆಲ್ಲಿ ಹೋದ ಹಾಲಿಗತ್ತರೇನು ಪ್ರಯೋಜನ ಬಾವ? ತಾವು ಹಿರಿಯರು. ತಮಗೆ ವಿವೇಕ ಹೇಳುವ ಯೋಗ್ಯತೆ ನನಗಿಲ್ಲ. ಈಗ ನನ್ನ ಮಕ್ಕಳು ದ್ಯೂತದಲ್ಲಿ ಸಕಲವನ್ನೂ ಕಳೆದುಕೊಂಡು ವನವಾಸಕ್ಕೆ ಹೊರಟು ನಿಂತಿದ್ದಾರೆ. ನಾನವರ ಸಂಗಡ ಹೊರಡಲು ತಮ್ಮಪ್ಪಣೆಗಾಗಿ ಇಲ್ಲಿ ಬಂದಿದ್ದೇನೆ.'

'ನೀನೇಕೆ ವನವಾಸಕ್ಕೆ ತೆರಳಬೇಕು ಕುಂತಿ? ಪುಣ್ಯಕ್ಕೆ ಧರ್ಮಪುತ್ರ ನಿನ್ನನ್ನೂ ಒತ್ತೆ ಇಡಲಿಲ್ಲವಲ್ಲಾ. ನೀನು ಸ್ವತಂತ್ರಳು. ಕುರುವಂಶದ ಸೊಸೆಯಾದ ನಿನ್ನ ಸ್ಥಾನ ಇಲ್ಲಿ ಈ ಅರಮನೆಯಲ್ಲಿ.'

'ಇದು ಅರಮನೆಯಲ್ಲ. ನನ್ನ ವೈರಿಗಳ ಮನೆ. ನನ್ನ ಪುತ್ರರನ್ನು ಕಾಡಿಗಟ್ಟಿದ ಗಾಂಧಾರಿ ಪುತ್ರರಿರುವ ಈ ಅರಮನೆಯಲ್ಲಿ ನಾನೊಂದು ಕ್ಷಣವೂ ನಿಲ್ಲಲಾರೆ. ಕಾಡಿಗೆ ಹೋಗಲು ಅಪ್ಪಣೆ ನೀಡಿ'.

'ವನವಾಸದ ಕೋಟಲೆಗಳನ್ನು ಸಹಿಸುವ ವಯಸ್ಸು ನಿನ್ನದಲ್ಲ. ಮೇಲಾಗಿ ನಿನ್ನ ಯೋಗಕ್ಷೇಮದ ಹೊಣೆ ನಿನ್ನ ಮಕ್ಕಳಿಗೆ ಈ ಕಾನನದಲ್ಲಿ ತೊಡಕಾಗಬಹುದು. ನಿನಗೀ ಅರಮನೆಯ ವಾಸ ಕಹಿ ಎನಿಸಿದರೆ ನನ್ನ ಪ್ರೀತಿಯ ವಿದುರನ ಮನೆಯಲ್ಲಿ ವಾಸವಿರು' ಎಂದರು ಭೀಷ್ಮ ಪಿತಾಮಹರು. ಅಲ್ಲೇ ನಿಂತು ಈ ಮಾತುಗಳಿಗೆ ಸಾಕ್ಷಿಯಾಗಿದ್ದ ವಿದುರ ಕೂಡಲೇ ತನ್ನ ದನಿಯನ್ನು ಜೋಡಿಸಿದ.

'ಪಿತಾಮಹರು ಹೇಳುವುದು ಸರಿಯಾಗಿಯೇ ಇದೆ ಅತ್ತಿಗೆ. ನಿನ್ನ ಪುತ್ರರು ವನವಾಸ ಅಜ್ಞಾತವಾಸ ಮುಗಿಸಿ ಬರುವವರೆಗೂ ನನ್ನ ಬಿಡಾರದಲ್ಲಿದ್ದು ಬಿಡಿ. ಅರಮನೆಯ ವೈಭೋಗ ಅನುಕೂಲಗಳು ಅಲ್ಲಿ ಇರದಿರಬಹುದು. ಆದರೆ ನಮ್ಮಲ್ಲಿ ಪ್ರೀತಿ ಗೌರವಗಳಿಗೆ ಕೊರತೆ ಇಲ್ಲ' ಮೈದುನನ ಪ್ರೀತ್ಯಾದರಗಳಿಗೆ ಮಾರುಹೋದ ಕುಂತಿ ಅವನ ಮನೆಗೆ ಕಾಲಿಟ್ಟಳು.

ವಿದುರನ ಮನೆ ಯಾವುದೇ ಆಡಂಬರವಿಲ್ಲದೆ ತರುಲತೆಗಳಿಂದ ಸುತ್ತುವರೆದ ಋಷ್ಯಾಶ್ರಮ ದಂತಿತ್ತು. ಮನೆ ಒಡೆಯನ ವ್ಯಕ್ತಿತ್ವದಂತೆಯೇ ಸರಳ ಸುಂದರ ಶಾಂತವಾಗಿದ್ದ ಮನೆಯದು. ವಿದುರ ಅತ್ತಿಗೆಗೆ ಮನೆಯೆಲ್ಲಾ ತೋರಿಸಿ ಹಿಂಬದಿಯ ಕುಟೀರದಲ್ಲಿ ವಿಶ್ರಮಿಸುತ್ತಿದ್ದ ತಾಯಿಯನ್ನು ಕುಂತಿಗೆ ಪರಿಚಯಿಸಿದ. ಸುರಿಯುತ್ತಿರುವ ಹಿಮರಾಶಿಯನ್ನು ನೆನಪಿಸುವ ಬಿಳಿಯ ಗುಂಗುರು ಕೂದಲ ನಡುವೆ ಹೊಳೆವ ಕಂಗಳ ಸೌಮ್ಯ ಮುಖದ ವೃದ್ಧೆಯನ್ನು ಪ್ರಥಮ ಬಾರಿಗೆ ಕುಂತಿ ನೋಡಿದಳು.

'ಇವಳೇನಾ ಆ ದಾ....ಸೀ..?' ಅವಳ ಅಂಕೆ ಮೀರಿ ನುಗ್ಗಿ ಬಂದ ಮಾತು ಅರ್ಧದಲ್ಲಿಯೇ ತುಂಡಾಗಿ ನಾಲಿಗೆ ಕಚ್ಚಿಕೊಂಡಳು. ನಕ್ಕ ವಿದುರ.

'ಹೌದು ಅತ್ತಿಗೇ. ಇವಳೇ ಆ ದಾಸಿ. ವಿದುರ ಎಂಬ ದಾಸೀಪುತ್ರನ ತಾಯಿ' ಛೇ, ಇಲ್ಲಿಗೇ ಆಶ್ರಯಕ್ಕಾಗಿ ಬಂದು ತಾನೀ ಮಾತನ್ನಾಡ ಬಾರದಿತ್ತು ಎಂದು ಗೊಂದಲಕ್ಕೀಡಾದ ಕುಂತಿಯ ಮನಸ್ಸು ಪಶ್ಚಾತ್ತಾಪ ಪಟ್ಟಿತು. 'ಬಾ ಕುಂತಿ, ನೀ ಕೇಳಿದ್ದರಲ್ಲೇನೂ ತಪ್ಪಿಲ್ಲ. ನಾನೇ ಆ ದಾಸಿ. ನೀನಿಲ್ಲಿಗೆ ಬಂದಿದ್ದು ಒಳಿತಾಯಿತು. ನಿನ್ನ ಮಕ್ಕಳು ಹಿಂದಿರುಗಿ ಬರುವವರೆಗೂ ನೀನು ನಮ್ಮೊಡನೆ ನೆಮ್ಮದಿಯಿಂದಿರಬಹುದು' ಎಂದು ಪ್ರೀತಿಯಿಂದ ಆದರಿಸಿದಳು. ಮೊದಮೊದಲು ಕಷ್ಟವೆಂದೆನಿಸಿ ದರೂ ಬದಲಾದ ಪರಿಸರಕ್ಕೆ ಕುಂತಿ ಕ್ರಮೇಣ ಹೊಂದಿಕೊಂಡಳು. ಇಬ್ಬರು ಸ್ತ್ರೀಯರೂ ಆಗಾಗ ಸಂಧಿಸುತ್ತಾ ಮಾತಿನಲ್ಲಿ ತೊಡಗಿಕೊಳ್ಳುತ್ತಾ ತುಂಬಾ ಹತ್ತಿರವಾದರು. ಮನದ ಚಿಂತೆ ಆತಂಕಗಳು ತುಂಬಿ ಹರಿದಾಗ ಆಕೆಯ ಬಳಿ ಅದನ್ನು ಆಡಿಕೊಂಡು ನೆಮ್ಮದಿ ಕಂಡುಕೊಳ್ಳುವುದು ಕುಂತಿಗೆ ಸಾಮಾನ್ಯವಾಯಿತು. ಒಮ್ಮೆ ತನ್ನ ತೌರಿನ ಸುಖಜೀವನದ ಬಗ್ಗೆ ಹೇಳಿಕೊಂಡರೆ ಮತ್ತೊಮ್ಮೆ ಧೀರ ಶೂರನಾದ ಕುರುವಂಶದ ಕುಡಿ ಎಂದುಕೊಂಡು ಪಾಂಡುವನ್ನು ವರಿಸಿದಾಗ ಇದ್ದ ಭ್ರಮೆ ಕ್ರಮೇಣ ಆತ ಹುಟ್ಟಿನಿಂದಲೇ ಅನಾರೋಗ್ಯವನ್ನು ಬಳುವಳಿಯಾಗಿ ತಂದವನು ಎಂದರಿವಾದಾಗ ಆದ ಆಘಾತ, ಅಸಹಾಯಕತೆ ಯನ್ನು ವರ್ಣಿಸುವಳು. ಜಗದ ಮುಂದೆ ತಾನು ಪರಿಪೂರ್ಣಎಂಬ ತೋರಿಕೆಗೆ ತನ್ನನ್ನು ಮೂರು ಬಾರಿ ದೇವಗಣಕ್ಕೆ ಸೇರಿದ ಪುರುಷರಿಂದ ಮಕ್ಕಳನ್ನು ಪಡೆಯಲು ಪ್ರೇರೇಪಿಸಿದಾಗ ತಾನು ಅನುಭವಿಸಿದ ದ್ವಂದ್ವ, ತಳಮಳ ಎಲ್ಲವನ್ನೂ ವರ್ಣಿಸುವಳು. ಮುಂದೆ ತನ್ನ ಮಕ್ಕಳು ದಾಯಾದಿಗಳಿಂದ ಅನುಭವಿಸಿದ ಕಷ್ಟಗಳು ಅವಹೇಳನೆ ಎಲ್ಲವನ್ನೂ ನೆನಪಿನಾಳದಿಂದ ತೇಲಿಸಿ ಕಣ್ಣೀರ್ಗರೆಯುವಳು.

ಅದೊಂದು ದಿನ ಯಾವುದೋ ರಾಜಕಾರಣ ನಿಮಿತ್ತ ಅಂಗರಾಜ ಕರ್ಣ ವಿದುರನನ್ನು ಕಾಣಲು ಮನೆಗೆ ಬಂದಿದ್ದ. ಅಕಸ್ಮಾತ್ ತೆರೆಯ ಮರೆಯಿಂದ ಅವನನ್ನು ನೋಡಿದ ಕುಂತಿ ಅತಿ ಭಾವುಕಳಾದಳು. ಅಲ್ಲಿಂದ ಓಡುತ್ತ ಗೆಳತಿಯ ಬಳಿ ಬಂದಳು. 'ನನ್ನ ಕರ್ಣ... ನನ್ನ ಕರ್ಣನನ್ನು ಕಂಡೆ' ಮಾತಿನಲ್ಲಿ ಹರ್ಷವಿತ್ತು ಉದ್ವೇಗವಿತ್ತು.

'ನಿನ್ನ ಕರ್ಣ? ಅದು ಹೇಗ ಅವನು ನಿನ್ನವನಾಗುತ್ತಾನೆ? ಆತ ನಿನ್ನ ವೈರಿಯಲ್ಲವೇ? ನಿನ್ನ ಮಕ್ಕಳು ಕಪಟ ದ್ಯೂತಕ್ಕೆ ಒಳಗಾಗಿ ವನವಾಸಕ್ಕೆ ತೆರಳುವುದರಲ್ಲಿ ಆತನ ಪಾತ್ರವೂ ಇತ್ತೆಂಬುದು ಮರೆತೆಯಾ?'

'ಕರ್ಣನಿಗೆ ಅವನ ಜನ್ಮವೃತ್ತಾಂತದ ಬಗ್ಗೆ ಅರಿವಿಲ್ಲ. ಅರಿವಿದ್ದರೆ ನನ್ನ ಮಕ್ಕಳ ಬೆಂಬಲಕ್ಕೆ ಧಾವಿಸುತ್ತಿದ್ದ. ಇದು ಸತ್ಯ.'

'ಏನದು ಅವನ ಜನ್ಮ ವೃತ್ತಾಂತ? ಬಿಡಿಸಿ ಹೇಳು ಕುಂತಿ'

ಪಾಪ ಕುಂತಿ. ಕರ್ಣನನ್ನು ಹತ್ತಿರದಿಂದ ನೋಡಿದ್ದೇ ಮಾತೃವಾತ್ಸಲ್ಯ ಉಕ್ಕಿ ಅಷ್ಟು ವರ್ಷಗಳಿಂದ ಹೃದಯದಲ್ಲಿ ಹೂತಿಟ್ಟುಕೊಂಡಿದ್ದ ಸತ್ಯವನ್ನು ಅನುದ್ದೇಶದಿಂದ ಹೊರಹಾಕಿ ಬಿಟ್ಟಿದ್ದಳು. ಇನ್ನು ಮುಚ್ಚಿಡುವುದರಲ್ಲಿ ಅರ್ಥವಿಲ್ಲ ಎಂದರಿತು ತಾನು ಮುಗ್ಧೆಯಾಗಿದ್ದಾಗ ನಡೆದ ಅಚಾತುರ್ಯ, ಜನಿಸಿದ ಗಂಡು ಮಗುವನ್ನು ಲೋಕಾಪವಾದಕ್ಕೆ ಹೆದರಿ ಗಂಗೆಯಲ್ಲಿ ತೇಲಿಬಿಟ್ಟದ್ದು, ಆಚೆ ತಟದಲ್ಲಿ ಅಭ್ಯಂಜನಕ್ಕೆ ಬಂದಿದ್ದ ವನಿತೆಯೊಬ್ಬಳು ಮಗುವನ್ನಪ್ಪಿ ಕೊಂಡೊಯ್ದುದು, ಕರ್ಣನನ್ನಿಲ್ಲಿ ಪ್ರಥಮ ಬಾರಿಗೆ ಕಂಡಾಗ ಅರ್ಜುನನ